ಶ್ರೀ ಟಿ. ಹನುಮಯ್ಯ.—ಡಿಪಾರ್ಟ್‌ಮೆಂಟಿನವರು recommend ಮಾಡಿದ್ದನ್ನು ಒಪ್ಪುತ್ತೀರಾ ಅಥವಾ ಸರ್ಕಾರದವರೇ ನೇರವಾಗಿ ತಮಗೆ ಬೇಕಾದ್ದನ್ನು ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಎಲ್ಲಾ departmental recommendations ಗಳನ್ನೂ ತರಿಸಿಕೊಂಡು ಪರಿಶೀಲನೆಮಾಡಿ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಸ್ಥಳದಲ್ಲಿ ಯಾವ ಯಾವ ಅನ ಕೂಲತೆಗಳಿದ್ದರೆ ಬ್ಲಾಕ್ ಕೊಡಬೇಕೆಂದು ಸೆಂಟ್ರಲ್ ಪ್ಲಾನಿಂಗ್ ಕಮೀಷನರಾಗಲಿ ಕೇಂದ್ರ ಸರ್ಕಾರದವರಾಗಲಿ ನಿಗದಿ ಮಾಡಿದ್ದಾರೆ? ಎಂಥ ಸ್ಥಳದಲ್ಲಿ ಕೊಡಬೇಕೆಂದು instructions ಕೊಟ್ಟಿದ್ದಾರೆ?

ಅಧ್ಯಕ್ಷರು.—ಹಿಂದೆ ಅದನ್ನೆಲ್ಲ ಹೇಳಿದ್ದಾರೆ.

Dr. R. NAGAN GOWDA.—They have given general instructions. ಈಗ ಏಪ್ರಿಲ್ ಒಂದರಲ್ಲಿ ಕೊಟ್ಟಿದ್ದರಲ್ಲಿ ಒಂದನ್ನು ತುಂಗಭದ್ರಾ ಪ್ರಾಜೆಕ್ಟ್ ಪ್ರದೇಶದಲ್ಲಿ ಕೊಡಬೇಕೆಂದು ನಿರ್ಣಯ ಮಾಡಿದ್ದಾರೆ. ಮಿಕ್ಕವುಗಳ ವಿಷಯದಲ್ಲಿ general ಆಗಿ ಸೂಚನೆಗಳನ್ನು ಕೊಟ್ಟಿದ್ದಾರೆ.

ಶ್ರೀ ಟಿ. ಹನುಮಯ್ಯ.—General instructions ಗೆ ವಿರುದ್ಧವಾಗಿ ಬ್ಲಾಕುಗಳನ್ನು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಇಲ್ಲ.

ಶ್ರೀ ಟಿ. ಹನುಮಯ್ಯ.—ಸಾಧಾರಣವಾಗಿ ನೀರು ವನತಿ ಎಲ್ಲದೆಯೋ ಅಲ್ಲಿಗೆ first preference ಕೊಡಬೇಕೆಂದಿರುವುದನ್ನು ಬಿಟ್ಟು ಬೇರೆಕಡೆ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಹಾಗೇನೂ ಇಲ್ಲ.

ಶ್ರೀ ಟಿ. ಹನುಮಯ್ಯ.—ಚಿತ್ರದುರ್ಗ ಡಿಸ್ಟ್ರಿಕ್ಟ್ ಹಿರಿಯೂರು ತಾಲ್ಲೂಕಿಗೆ first preference ಕೊಡಬೇಕೆಂದಿದ್ದರೂ ಬೇರೆ ಕೊಟ್ಟಿದ್ದೀರಲ್ಲವೇ?

ಡಾ॥ ಆರ್. ನಾಗನಗೌಡ.—ಹಿರಿಯೂರು ತಾಲ್ಲೂಕಿಗೂ, in course of time ಬರುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ನಂಸ್ಥಾನವನ್ನೆಲ್ಲಾ ಬ್ಲಾಕ್ ಆಗಿ ವಿಂಗಡಿಸಿ ಮುಂದಿನ ವರ್ಷಗಳಲ್ಲಿ ಇಷ್ಟಿಷ್ಟು N.E.S. ಬ್ಲಾಕ್‌ಗಳನ್ನು ಇಂಥಿಂಥಕಡೆ ಕೊಡಬೇಕೆಂದು ಪ್ರೋಗ್ರಾಂ ಹಾಕಿದ್ದೀರಾ?

ಡಾ॥ ಆರ್. ನಾಗನಗೌಡ.—ಇಲ್ಲ, ಹಾಗೇನೂ ಇಲ್ಲ. ಅಲ್ಲದೆ, ಇಂಡಿಯಾ ಸರ್ಕಾರದವರು ಎಷ್ಟು ಬ್ಲಾಕುಗಳನ್ನು ಕೊಡುತ್ತಾರೆಂಬುದೂ ಗೊತ್ತಿಲ್ಲ. ಹೋದವರ್ಷ ಅಕ್ಟೋಬರಿನಲ್ಲಿ ನಮಗೆ ಒಂದು ಕೊಟ್ಟರು, ಈ ವರ್ಷ ಏಪ್ರಿಲ್‌ನಲ್ಲಿ ಕೊಟ್ಟಿದ್ದಾರೆ. ನಮಗೀಗ ಬಂದಿರುವ information ಮೇರೆಗೆ ಜುಲೈನಲ್ಲಿ ಕೆಲವು, ಅಕ್ಟೋಬರಿನಲ್ಲಿ ಕೆಲವು ಕೊಡುವಂತೆ ಗೊತ್ತಾಗಿದೆ. ಖಚಿತವಾಗಿ ಎಷ್ಟು ಕೊಡುತ್ತಾರೋ ಗೊತ್ತಿಲ್ಲ. ಖಚಿತವಾಗಿ ಎಷ್ಟು ಕೊಡುತ್ತಾರೆಂಬುದು ನಿರ್ಣಯವಾದರೆ distribute ಮಾಡುವುದನ್ನು ಯೋಚನೆ ಮಾಡಬಹುದು.

ಶ್ರೀ ಬಿ. ಹುಚ್ಚೇಗೌಡ.—ಈಗ ಪ್ರೋಗ್ರಾಂ ಹಾಕಿಕಳುಹಿಸಬೇಕೆಂದು instruction ಏನಾದರೂ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಬಂದಿಲ್ಲ.

12-30 P.M.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಎರಡನೆಯ ಬ್ಲಾಕನ್ನು ಮಾಡುವಾಗ ಆಯಾ ಪ್ರದೇಶದಲ್ಲಿರುವ ಎಲ್. ಎ. ಮೆಂಬರುಗಳ ಪ್ರಭಾವಕ್ಕೆ ಅನುಸಾರವಾಗಿ ತಾವು ಈ ಬ್ಲಾಕುಗಳನ್ನು ಮಾಡಿದ್ದೀರಲ್ಲವೇ?

ಡಾ॥ ಆರ್. ನಾಗನಗೌಡ.—ಹಾಗೇನೂ ಮಾಡಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಲವುಕಡೆ ನೀರಿನ ಸರಬರಾಯಿ ಚೆನ್ನಾಗಿಲ್ಲದಿದ್ದರೂ ಅಲ್ಲಿಗೆ N.E.S. ಬ್ಲಾಕುಗಳನ್ನು ಕೊಟ್ಟು ನೀರಿನ ವ್ಯವಸ್ಥೆ ಇರುವ ಜಾಗಕ್ಕೆ ಏಕೆ ಕೊಡಲಿಲ್ಲ?

ಡಾ॥ ಆರ್. ನಾಗನಗೌಡ.—ಅಲ್ಲಿ ನೀರಿನ ವ್ಯವಸ್ಥೆ ಸರಿಯಾಗಿ ಇಲ್ಲದುದರಿಂದಲೇ ಅನುಕೂಲವಾಗಲಿ ಎಂದು ಕೊಟ್ಟಿದ್ದೇವೆ. ಹೆಚ್ಚಿಗೆ ಅನುಕೂಲವಿರುವ ಕಡೆಗೂ ಅನಂತರ ಕೊಡುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಈಗ ಈ 12 ಬ್ಲಾಕುಗಳಲ್ಲಿ ಮಾನ್ಯ ಮಂತ್ರಿಗಳಿಗೆ ಸಂಬಂಧಪಟ್ಟಂಥ ಕಾನ್ಸ್ಟಿಟ್ಯುಯೆನ್ಸಿಯೊಳಗೆ ಎಷ್ಟಿರುತ್ತವೆ ಎನ್ನುವುದನ್ನು ತಿಳಿಸುತ್ತೀರಾ?

ಡಾ॥ ಆರ್. ನಾಗನಗೌಡ.—ಎಲ್ಲೋ ಆಕಸ್ಮಿಕವಾಗಿ ಒಂದೆರಡು ಹಾಗಾಗಿದೆ. ಅಷ್ಟೇ ಹೊರತು ಅವರಿಗಾಗಿ ಏನೂ ಹಾಗೆ ಮಾಡಲಿಲ್ಲ.

ಶ್ರೀ ವಿ. ಆರ್. ನಾಯ್ಡು.—ಈಗ ಬೆಂಗಳೂರಿನಲ್ಲಲ್ಲೆಲ್ಲೇ ಸ್ಲಂಪ್ ಏರಿಯಾ ಜಾಸ್ತಿಯಾಗಿದೆ. ಅಲ್ಲಿಗೂ ಕೂಡ ಈ ಬ್ಲಾಕುಗಳನ್ನು ಕೊಡುತ್ತೀರಾ?

ಡಾ॥ ಆರ್. ನಾಗನಗೌಡ.—ಈ ಯೋಜನೆ ಅದಕ್ಕೆ ಅನ್ವಯಿಸುವುದಿಲ್ಲ; ಅದುದರಿಂದ ಬೆಂಗಳೂರಿಗೆ ಕೊಡುವುದಕ್ಕಾಗುವುದಿಲ್ಲ.

Kabbal Hill, Kanakapura Taluk (Provision of facilities like rest house, well, etc.)

Q.—694. Sri S. KARIAPPA (Virupakshapura).—

Will the Government be pleased to state:—

(*a*) whether there is a long standing representation for the creation of facilities, namely, a well fitted with electric pump, a rest house and railings to the hill at Kabbal, Kanakapura Taluk;

(*b*) the steps taken by them?

A.—Sri Kadidal MANJAPPA (Minister for Revenue and Public Works).—

(*a*) No.

(*b*) Does not arise in view of reply to (*a*).

ಶ್ರೀ ಎಸ್. ಕರಿಯಪ್ಪ.—ಈ ಕಬ್ಬಾಳದ ದೇವಸ್ಥಾನ ಎನ್ನುವುದು ಒಂದು ಮೇಜರ್ ಮುಜ್ರಾಯಿ ದೇವಸ್ಥಾನ ಅಲ್ಲವೇ?

Sri Kadidal MANJAPPA.—Notice. I am not aware of it. All the same, I have instructed the concerned authorities to prepare an estimate. The

question will be examined after the estimate is received.

ಶ್ರೀ ಎಸ್. ಕರಿಯಪ್ಪ.—ಈ ದೇವಸ್ಥಾನದ ಬಗ್ಗೆ ಕೈಗೊಳ್ಳಬೇಕಾಗಿರತಕ್ಕಂಥ ಕೆಲವು ಕಾರ್ಯಕ್ರಮಗಳ ಬಗ್ಗೆ ಆ ದೇವಸ್ಥಾನದ ಧರ್ಮದರ್ಶಿಗಳು ತೀರ್ಮಾನ ಮಾಡಿ ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—Government have not admitted that it is a historical and important place.

ಶ್ರೀ ಎಸ್. ಕರಿಯಪ್ಪ.—ಈ ಕಬ್ಬಾಳದ ಬೆಟ್ಟ ಒಂದು ಚರಿತ್ರಾರ್ಹವಾದ ಸ್ಥಳವಾಗಿದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದೇನೋ ನಾನು ಅಲ್ಲಿಗೆ ಹೋಗಿನೋಡಿಲ್ಲ.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ಇಂಥ ಚರಿತ್ರಾರ್ಹವಾದ ಸ್ಥಳಗಳಿಗೆ ಅನುಕೂಲಗಳನ್ನು ಕಲ್ಪಿಸುವುದು ಸರ್ಕಾರದವರಿಗೆ ಆವಶ್ಯಕವೆಂದು ಕಂಡು ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮೈಸೂರು ಸಂಸ್ಥಾನದಲ್ಲಿ ಇಂಥ ಚರಿತ್ರಾರ್ಹವಾದ ಸ್ಥಳಗಳು ಅನೇಕವಾಗಿರುತ್ತವೆ. ಅವುಗಳಿಗೆಲ್ಲಾ ಒಂದೇ ಸಲಕ್ಕೆ ಗಮನಕೊಡಲು ಹಣದ ಅನುಕೂಲತೆ ಇರುವುದಿಲ್ಲ.

Bennikall Tank (Restoration).

Q.—706. Sri KOTRA BASAVANA GOUD (Kudligi).—

Will the Government be pleased to state :—

(*a*) whether they will undertake to restore the breached tank of Bennikall in Kudligi firka of Bellary District;

(*b*) the area it would irrigate ?

A.—Sri Kadidal MANJAPPA (Minister for Revenue and Public Works).—

(*a*) and (*b*) This has to be investigated.

ಶ್ರೀ ಕೊಟ್ರ ಬಸವನಗೌಡ.—ಈ ಕೆರೆಯನ್ನು ಜೀರ್ಣೋದ್ಧಾರ ಮಾಡತಕ್ಕ ಬಗ್ಗೆ ಈ ಹಿಂದೆ ಮದ್ರಾಸ್ ಸರ್ಕಾರದವರು ಒಂದು ಅಂದಾಜು ತಯಾರಿಸಿದ್ದರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೊಟ್ರ ಬಸವನಗೌಡ.—ಈ ಕೆರೆಯನ್ನು ಜೀರ್ಣೋದ್ಧಾರ ಮಾಡಿಕೊಡಬೇಕೆಂದು ಇಲ್ಲಿಗೆ 20 ವರ್ಷಗಳಿಂದಲೂ ಅಲ್ಲಯ ಜನರು agitate ಮಾಡುತ್ತಿದ್ದಾರೆ ಅನ್ನುವುದೂ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರಶ್ನೆಯನ್ನೆಲ್ಲಾ ನಾನು ಪುನಃ ಪರಿಶೀಲನೆಮಾಡಬೇಕಾಗಿದೆ. ಆದ್ದರಿಂದ ಈಗಲೇ ನಾನೇನೂ ಉತ್ತರ ಕೊಡಲಾರೆ.

Land Release from Date Grove area in Chikmagalur District.

Q.—763. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state :—

(*a*) whether there are any representations from landless people to release more lands out of date grove area in Chikmagalur District;

(*b*) if so, the number of darkhasts pending in this behalf in Chikmagalur District ?

A.—Sri Kadidal MANJAPPA (Minister for Revenue and Public Works).—

(*a*) Yes. In Kadur Taluk, applications are being received for grant of lands out of date groves.

(*b*) Fifty darkhasts in Kadur Taluk, and one darkhast in Chikmagalur Taluk, received from landless and other persons are pending disposal. Information separately regarding applications received from landless and other persons is not readily available.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಈ ಅರ್ಜಿಹಾಕಿರತಕ್ಕವರ ಹೆಸ್ರಿಕೆ ಎಷ್ಟು ಜನರು ಜಮೀನಿಲ್ಲದವರು ಇದ್ದಾರೆ ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳೆಲ್ಲಾ ಈಗ ನನ್ನಲ್ಲಿರುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಅರ್ಜಿಗಳೆಲ್ಲಾ ಇತ್ಯರ್ಥವಾಗದೆ ಎಷ್ಟು ದಿವಸಗಳಿಂದ ಹೀಗೇ ಮುಲ್ಕಿನಿಂತಿರುತ್ತವೆ ?

ಶ್ರೀ ಕಡಿದಾಳ್ ಮಂಜಪ್ಪ.—6-8 ತಿಂಗಳಿಂದ ಹಾಗೆ ನಿಂತಿರಬಹುದು.

ಶ್ರೀ ಜಿ. ಪುಟ್ಟಸ್ವಾಮಿ.—ಈ ಜಮೀನುಗಳನ್ನು ಆ ಅರ್ಜಿದಾರರಿಗೆ ಇನ್ನೆಷ್ಟು ದಿವಸಗಳಲ್ಲಿ release ಮಾಡಬೇಕೆಂದು ಹೇಳಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಭಾಗಧಲ್ಲಾಗಲೇ ಜಮೀನನ್ನು release ಮಾಡಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಎಲ್ಲಿ ಮರಗಳಿಲ್ಲವೋ ಅಂಥ ಜಾಗದಲ್ಲಿ ಮತ್ತು ಎಲ್ಲಿ ಸಾಗುವಳಿಗೆ ಅವಕಾಶ ಮತ್ತು ಜಮೀನು ಲಾಯಕ್ಕಾಗಿಲ್ಲವೋ ಅಂಥ ಸ್ಥಳದಲ್ಲಿ ಮಾತ್ರ release ಮಾಡಿ ಬಾಕಿ ಕಡೆ ಹಾಗೆ ನಿಲ್ಲಿಸಿಕೊಂಡಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ಮರಗಳು ಜಾಸ್ತಿಯಾಗಿರುತ್ತವೆಯೋ ಅಲ್ಲಿ ಮಾತ್ರ ಈ ಜಮೀನನ್ನು ಇನ್ನೂ release ಮಾಡಿಲ್ಲ ಅಷ್ಟೆ.

ಶ್ರೀ ಜಿ. ಪುಟ್ಟಸ್ವಾಮಿ.—ಮರಗಳು ಇಲ್ಲದೆ ಇರತಕ್ಕ ಕಡೆ ಕೂಡ ಜಮೀನನ್ನು release ಮಾಡದೆ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ? ಹೀಗೆ ಮಾಡಲು ತಮ್ಮ ಉದ್ದೇಶವೇನು ?